**ವ್ಯಾಖ್ಯಾನ**

# <u>ಜಾಲಿಯ ಮರವಂತೆ</u>

1. **Ref.**: Haridasa Taranga Part-1, Published by M/s. Vyaasaanandadasa Pratishtaana, Bengaluru-98, First Edition 2014, page No. 65.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಸುಜನರಿಗೆ ಸದಾ ಏನಾದರೂ ತೊಂದರೆಯನ್ನು ಕೊಡುವುದೇ ತಮ್ಮ ಧರ್ಮವಾಗಿಸಿಕೊಂಡಿರುತ್ತಾರೆ ದುರ್ಜನರು. ಹಾಲಿನಲ್ಲಿ ಹುಳಿಹಿಂಡುತ್ತಾರೆ. ಹಾಲಿನಲ್ಲಿ ಉಪ್ಪು ಬೆರೆಸುತ್ತಾರೆ ಅವರು. ಒಂದು ಕುಟುಂಬದಲ್ಲಿ ಒಬ್ಬ ಕೆಟ್ಟವ್ಯಕ್ತಿಯಿದ್ದರೆ ಸಾಕು, ಆ ಕುಟುಂಬವೇ ಸರ್ವನಾಶವಾಗುತ್ತದೆ. ಸಂಸಾರದಲ್ಲಿ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಈ ಪದದಲ್ಲಿ ದಾಸರು ದುರ್ಜನರನ್ನು ಜಾಲಿಯ ಮರಕ್ಕೆ ಹೋಲಿಸಿದ್ದಾರೆ.

**ಜಾಲಿಯ ಮರವಂತೆ । ಧರೆಯೊಳು ದುರ್ಜನರು** ॥ **ಪ** ॥

**ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂಥ** ॥ **ಅ.ಪ.** ॥

ಜಾಲಿಯ ಮರವು ಬುಡದಿಂದ ಮೇಲಿನವರೆಗೂ (ಮೂಲಾಗ್ರ–ಮೂಲದಿಂದ ಅಗ್ರದವರೆಗೆ ಅಂದರೆ ಬುಡದಿಂದ ತುದಿಯವರೆಗೂ) ಮುಳ್ಳಿನಿಂದಲೇ ಕೂಡಿರುವಂತಹ ಒಂದು ಮರವು. ದುರ್ಜನರೂ ಜಗತ್ತಿನಲ್ಲಿ ಹಾಗೆಯೇ ಇದ್ದಾರೆ. ಅವರ ಮೈ ಮತ್ತು ಮನಸ್ಸು ಎಲ್ಲವೂ ವಿಷಮಯವೇ. ಬೇರೆಯವರಿಗೆ ತೊಂದರೆ ಕೊಡುವುದೇ ಅವರ ಧರ್ಮವು. ಅವರ ಇಂದ್ರಿಯಗಳು ಸದಾ ದುರ್ವಿಷಯಗಳತ್ತ ಸಂಚರಿಸುತ್ತ ಪರಪೀಡನಾ ರೂಪದ ಅಧರ್ಮ ವರ್ತನೆಯಲ್ಲಿ ಮನಸ್ಸನ್ನು ಮಾಡುವವರಾಗಿರುತ್ತಾರೆ.

**ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ । ಹಸಿದು ಬಂದವರಿಗೆ ಹಣ್ಣು ಇಲ್ಲ** ॥

**ಕುಸುಮ ವಾಸನೆ ಇಲ್ಲ ಕೂಡಲು ಸ್ಥಳವಿಲ್ಲ । ರಸದಲ್ಲಿ ಸ್ವಾದವು ವಿಷದಂತೆ ಇರುತಿಹ** ॥ **1** ॥

ದಾರಿಹೋಕರು ಮಾರ್ಗಾಯಾಸದಿಂದಲೂ ಬಿಸಿಲಿನ ಬೇಗೆಯಿಂದಲೂ ಬಳಲಿ ದಾಗ ಜಾಲಿಯ ಗಿಡದ ನೆರಳಿನಲಿ ಕೂಡಬೇಕೆಂದು ಬಯಸಿದರೂ ಅವರು ಅಲ್ಲಿ ಕೂಡಲಿಕ್ಕೆ ಆಗಲಾರದು. ಏಕೆಂದರೆ ಜಾಲಿಯ ಮರದ ಬುಡದಲ್ಲಿ ನೆರಳಿದ್ದರೂ ಅಲ್ಲೆಲ್ಲಾ ಜಾಲಿಯ ಮುಳ್ಳುಗಳೇ ತುಂಬಿರುತ್ತವೆ. ಅಲ್ಲದೆ ಈ ಗಿಡದ ನೆರಳೂ ಅತ್ಯಲ್ಪ. ಅಕಸ್ಮಾತ್ ಯಾರಾದರೂ ಆ ನೆರಳಿರುವ ಸ್ಥಳಕ್ಕೆ ಕಾಲಿಟ್ಟರೆ ಸಾಕು ಅವರ ದೇಹಕ್ಕೆ ಗಾಯವಾಗುವ ಸಂಭವವೇ ಹೆಚ್ಚು ದಾರಿಹೋಕರುಗಳು ಹಸಿವೆಯಾದರೆ ದಾರಿಯಲ್ಲಿರುವ ಗಿಡಮರಗಳ ಹಣ್ಣು ಹಂಪಲುಗಳನ್ನು ಸ್ವೀಕಾರ ಮಾಡಿ ಮುಂದೆ ಸಾಗುತ್ತಾರೆ. ಆದರೆ ಜಾಲಿಯ ಮರದಿಂದ ಅವರಿಗೆ ಯಾವುದೇ ಹಣ್ಣು ದೊರೆಯಲಾರದು. ಜಾಲಿಯ ಹೂವುಗಳಿಗೆ ಸುವಾಸನೆಯಿರುವುದಿಲ್ಲ. ಜಾಲಿಯ ತೊಪ್ಪಲು, ಬೀಜ ಇತ್ಯಾದಿಗಳನ್ನು ತಿನ್ನಲಾಗುವುದಿಲ್ಲ. ಮರೆತು ಸ್ವಲ್ಪ ಅವುಗಳನ್ನು ಬಾಯಿಯಲ್ಲಿ ಹಾಕಿಕೊಂಡರೆ ಸಾಕು, ಅದರ ಸ್ವಾದವು ವಿಷದಂತೆ ಇರುತ್ತದೆ. ಅದೇ ತರಹದಲ್ಲಿ ದುರ್ಜನರು ಯಾರಿಗೂ ಆದರಾತಿಥ್ಯಗಳನ್ನು ಮಾಡುವುದಿಲ್ಲ. ಅವರು ಸಜ್ಜನರನ್ನು ತಮ್ಮ ಪಾಡಿಗೆ ಬಿಡುವುದಿಲ್ಲ. ಸಜ್ಜನರ ಬಳಿಗೇ ಹೋಗಿ ಅವರಿಗೆ ತೊಂದರೆಯನ್ನು ಕೊಡುವುದು ಅವರ ಸ್ವಭಾವವು.

**ಊರ ಹಂದಿಗೆ ಷಡ್ರಸಾನ್ನವನಿಕ್ಕಲು । ನಾರುವ ದುರ್ಗಂಧ ಬಿಡುವುದುಂಟೆ ।**
**ಘೋರಪಾಪಿಗೆ ತತ್ವಜ್ಞಾನ್ನ ಹೇಳಿದರೆ । ಕ್ರೂರ ಕರ್ಮವ ಬಿಟ್ಟು ಸುಜನನಾಗುವನೇ ॥ 2 ॥**

ಹೊಲಸು ತಿನ್ನುವುದೇ ಹಂದಿಯ ಕೆಲಸವು. ಹೊಲಸಿನಲ್ಲಿ ಹೊರಳಾಡುತ್ತ ಇರುವ ಆ ಪ್ರಾಣಿಯು ಅಲ್ಲಿಂದ ಮೇಲೆದ್ದು ಬಂದು ಸ್ವಚ್ಛವಾದ ಸ್ಥಳದಲ್ಲಿ ಓಡಾಡಿದರೆ ಆ ಸ್ಥಳವೂ ಹೊಸಲಾಗುತ್ತದೆ. ದೇಹವನ್ನು ತೊಳೆಯದೆ ಹೊಲಸು ಹಚ್ಚಿಕೊಂಡು ಸಂಚರಿಸುವ ಆ ಪ್ರಾಣಿಯ ಸಂಪರ್ಕದಿಂದ ಇತರರಿಗೂ ಅನೇಕ ರೋಗಗಳು ಬರುತ್ತವೆ. ಅಂತಹ ಪ್ರಾಣಿಗೆ ವಿಶೇಷವಾದ ಸಾತ್ವಿಕವಾಗಿ ಇರುವ ಆರು ರಸಗಳಿಂದ ಯುಕ್ತವಾದ ಆಹಾರವನ್ನು ಹಾಕಿದರೂ ಪ್ರಯೋಜನವಾಗುವುದಿಲ್ಲ. ಅದು ಮತ್ತೆ ಅಶುದ್ಧ ಸ್ಥಳಕ್ಕೆ ಹೋಗಲು ಯತ್ನಿಸುತ್ತದೆ. ಅದರ ದೇಹವು ದುರ್ಗಂಧದಿಂದಲೇ ತುಂಬಿರುತ್ತದೆ. ಹಾಗೆಯೇ ದುರ್ಜನರಿಗೆ ನಾವು ಏನೆಲ್ಲವನ್ನು ಕೊಟ್ಟರೂ ಅವರು ತಮ್ಮ ಕೆಟ್ಟ ಛಾಳಿಯನ್ನು ಬಿಡುವುದಿಲ್ಲ. ಕೆಟ್ಟ ಪಾಪಿಗೆ (ನೀಚನಿಗೆ) ತತ್ವಜ್ಞಾನವನ್ನು ಉಪದೇಶಿಸಿ ಆತನಿಗೆ ಸಜ್ಜನನಾಗಿ ಬಾಳಲು ಎಷ್ಟು ಹೇಳಿದರೂ ಆತನು ತನ್ನ ಕೆಟ್ಟದಾದ, ಕ್ರೂರವಾದ ಕರ್ಮಗಳನ್ನು ಬಿಟ್ಟು ಒಳ್ಳೆಯ ಮನುಷ್ಯನಾಗಲು ಸಾಧ್ಯವೇ ಇಲ್ಲ. ತಮೋಯೋಗ್ಯನಾದ ಆ ನೀಚನಿಗೆ ಎಷ್ಟು ಒಳ್ಳೆಯ ಸೌಲಭ್ಯಗಳನ್ನು ಕೊಟ್ಟರೂ ಆತನಿಗೆ ಅದರಿಂದ ಒಳ್ಳೆಯ ಪರಿಣಾಮವಾಗುವುದಿಲ್ಲ, ಆತನಿಂದ ಸಮಾಜಕ್ಕೆ ಹಾನಿಯೇ ನಿಶ್ಚಿತವು. ಅದಕ್ಕೆ ಶಾಸ್ತ್ರಗಳೂ ದುರ್ಜನರಿಗುಪ ದೇಶ ನಿರರ್ಥಕವೆಂದು ಹೇಳಿದೆ. ಕೆಲವೊಮ್ಮೆ ಅದರ ದುರುಪಯೋಗವನ್ನು ಪಡೆದುಕೊಂಡು ಕ್ರೂರಕರ್ಮವೆಸಗುವ ಸಾಧ್ಯತೆಗಳುಂಟು.

**ತನ್ನಿಂದ ಉಪಕಾರ ತಟುಕಾದರೂ ಇಲ್ಲ । ಬಿನ್ನಣ ಮಾತಿಗೆ ಕೊನೆಯಿಲ್ಲವು ॥**
**ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ । ಇನ್ನಿವರ ಕಾರ್ಯವು ಪುರಂದರವಿಠಲ ॥ 3 ॥**

ತಮೋಯೋಗ್ಯರಾದ ದುರ್ಜನರಿಂದ ಸಮಾಜವು ಯಾವುದೇ ಉಪಕಾರವನ್ನು ಹೊಂದಲು ಸಾಧ್ಯವೇ ಇಲ್ಲ. ಆ ದುರ್ಜನರು ತಮ್ಮ ಅಂದದ ಮಾತಿನಿಂದ (ಬಿನ್ನಣ–ನೈಪುಣ್ಯದ) ನಮ್ಮನ್ನು ಮೋಸಗೊಳಿಸುತ್ತಾರಾದ್ದರಿಂದ ನಾವು ಬಹಳ ಎಚ್ಚರದಿಂದಿರಬೇಕು. ಅವರ ಉದ್ದೇಶ ನಾವು ಹಾಳಾದರೂ ಅವರಿಗೆ ತೊಂದರೆಯಿಲ್ಲ ಆದರೆ ಅವರಿಗೆ ಮಾತ್ರ ನಮ್ಮಿಂದ ಲಾಭವಾಗಬೇಕು. ಆದುದರಿಂದಲೇ ದುರ್ಜನರನ್ನು ಅನ್ನಕ್ಕೆ ಸೇರಿದ ಕುನ್ನಿಮಾನವರೆಂದು ಹೀಯಾಳಿಸಿದ್ದಾರೆ. ದುರ್ಜನರ ರೀತಿಯೇ ಹೀಗೆ ಅವರಿಂದ ನಾವು ದೂರವಿರಬೇಕು ಎಂಬ ಎಚ್ಚರಿಕೆಯನ್ನು ದಾಸರು ಕೊಟ್ಟಿದ್ದಾರೆ.

ಜಾಲಿಯ ಗಿಡದಿಂದ ನಮಗೆ ಉರುವಲು ದೊರೆಯುತ್ತದೆ. ಜಾಲಿಯ ಅಂಟಿನಿಂದ ಅಂಟಿನ ಉಂಡಿಯನ್ನು ಮಾಡುತ್ತಾರೆ. ಜಾಲಿಯ ತೊಪ್ಪಲನ್ನು ತಿಂದು ಆಡು ಹಾಲನ್ನು ಕೊಡುತ್ತದೆ. ಜಾಲಿಯ ಗಿಡವು ಎಲ್ಲ ಗಿಡಮರಗಳಂತೆ ಅಶುದ್ಧವಾಯುವನ್ನು ಸ್ವೀಕರಿಸಿ ಶುದ್ಧವಾಯುವನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತದೆ. ಜಾಲಿಯ ಟೊಂಗೆಗಳನ್ನು ಕಡಿದು ಹೊಲಗದ್ದೆಗಳಿಗೆ ಬೇಲಿಯನ್ನು ಹಾಕುತ್ತಾರೆ. ಆದುದರಿಂದ ದುರ್ಜನರು ಜಾಲಿಯ ಗಿಡಕ್ಕಿಂತಲೂ ಬಹಳ ಕೀಳು ಎಂಬ ಭಾವವನ್ನು ನಾವು ತಿಳಿದುಕೊಳ್ಳಬೇಕು.

ಶ್ರೀಪುರಂದರದಾಸರು ದುರ್ಜನರನ್ನು ಜಾಲಿಯ ಮರಕ್ಕೆ ಉಪಮಾನವನ್ನಾಗಿ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ. ದುಷ್ಟಜನರು ತಾವು ದುಷ್ಟಪ್ರವೃತ್ತಿಯಲ್ಲಿ ತೊಡಗುವುದರ ಜೊತೆಗೆ ಸಜ್ಜನರಿಗೆ ಉಪದ್ರವರಾಗಿರುತ್ತಾರೆ. ಕುಟುಂಬಕ್ಕೆ ಸಮಾಜಕ್ಕೆ ಜಾಲಿಮರದಂತೆ ಕಂಟಕರಾಗಿರುತ್ತಾರೆ. 'ಕೂಡೆ ಕುಮತಿಗಳ ಕುಪಿತ (ದುರ್ಜನರ) ಮನುಜರ ಸಂಗಬೇಡ' ಎಂದ ಪುರಂದರರು 'ಇರಬೇಕು ಹರಿದಾಸರ ಸಂಗ ಇರಬೇಕು' ಎಂದ ಮಾತುಗಳನ್ನು ಸ್ಮರಿಸಬೇಕು. ಒಂದು ಜಾಲಿಯಮರದ ಗುಣಧರ್ಮಗಳನ್ನೇ ಹೊಂದಿರುವ ದುರ್ಜನರ ಸಹವಾಸದಿಂದ ದೂರವಿರಿ ಎಂದು ಉಪದೇಶ ಮಾಡಿದ ದಾಸರ ಹಿತೋಪದೇಶ ಸಾರ್ವಕಾಲಿಕ ಸತ್ಯವಾಗಿದೆ.

**ವಿಶೇಷ ವಿಚಾರ:**

(1) ಪುರಂದರದಾಸರು ಕಲಿಯುಗದ ಮಹಿಮೆಯನ್ನು ಹೇಳುವಾಗ ದುರ್ಜನರನ್ನು ಹೀಗೆ ವರ್ಣಿಸಿದಾರೆ. "ಕಂಡುದನೆ ಹೇಳರು ಕಾಣದನೆ ಪೇಳುವರು । ಉಂಡ ಮನೆಗಳರಡನ್ನು ಬಗೆಯುತ್ತಲಿಹರು ॥ ಕೊಂಡಾಡಿ ಬೇಡಿದರು ಕೊಡರೊಂದು ರುವಿಯನು ದಂಡಿಸಿ ಕೇಳುವವರಿಗೆ ಧನವ ಕೊಡುತಿಹರು ॥

(2) ಪಾಪಿ ಬಲ್ಲನೆ ಪರರಸುಖದುಃಖವ । ಕೋಪಿ ಬಲ್ಲನೆ ಇಂತ ಸುಗುಣದ ಘನತೆಯ ॥ – ಪುರಂದರದಾಸರು.

(3) ಜ್ಞಾನ ಕರ್ಮೇಂದ್ರಿಯಗಳಿಗಭಿಮಾನಿ ಕಲ್ಯಾದ್ಯಖಿಳ ದಿತಿಜರು ಹೀನಕರ್ಮವ ಮಾಡಿ ಮಾಡಿಸುತಿಹರು ಸರ್ವರೊಳು । (ಹರಿಕಥಾಮೃತಸಾರ – ದೈತ್ಯ ತಾರತಮ್ಯ ಸಂಧಿ)

(4) ಪಾಪಿಗಳ ದೃಷ್ಟಿಯೂ ತಾಕಬಾರದು ಎಂದು ಪುರಂದರದಾಸರು ಹೇಳುತ್ತಾರೆ.
"ಎಂಥಾ ಪಾಪಿ ದೃಷ್ಟಿ ತಾಗಿತು । ಗೋಪಾಲಕೃಷ್ಣಗೆ ।
ಕೆಟ್ಟ ಪಾಪಿ ದೃಷ್ಟಿ ತಾಗಿತು ॥".

## ಶ್ರೀಪುರಂದರದಾಸರ ಹಿತೋಕ್ತಿ

ಜ್ಞಾನವಂತನಾಗು ಜ್ಞಾನಿಗಳಿಗೆ ಬಾಗು
ಜ್ಞಾನ ಬೆಳಕಿನಿಂದ ಜ್ಞಾನ ತಮವ ನೀಗು ॥

ವಿದ್ಯೆ ಹೇಳುವ ನೀನೆ ಬುದ್ದಿ ಕಲಿಸುವ ನೀನೆ
ಉದ್ಧಾರಕರ್ತ ಮಮ ಸ್ವಾಮಿ ನೀನೆ ॥

ಎನ್ನ ಕಡೆಹಾಯಿಸುವುದು ನಿನ್ನ ಭಾರ
ನಿನ್ನ ನೆನೆಯುತಿಹುದು ಎನ್ನ ವ್ಯಾಪಾರ ॥

ಹರಿಯ ಸೇವೆ ಮಾಡದವನ ಹರಿಯ ಗುಣಗಳೆಣಿಸದವನ ।
ಹರಿಯ ಕೊಂಡಾಡದವನ । ಹರಿಯ ತಿಳಿಯದವನ ಜನ್ಮ ।

ವ್ಯರ್ಥವಲ್ಲವೆ ಜನ್ಮವ್ಯರ್ಥವಲ್ಲವೆ ॥

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಪಂ॥ ಶ್ರೀ **ಪರಶುರಾಂ ಬೆಟಗೇರಿ**